KARNATAKA NURSING & PARAMEDICAL SCIENCES EDUCATION (REGULATION) AUTHORITY
ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ನಿಯಂತ್ರಣ ಪ್ರಾಧಿಕಾರ

**Para Medical Board**

# 40/20A, Lakshmi Complex, First Floor, Opp. Vani Vilas Hospital, Fort, Bengaluru-560002
**Ph No**: 080-26702159, 26705773 **Email**: pmboffice97@gmail.com / pmbexamination@gmail.com

**PMB/232 /20-21** **Date: 23.08.2021**

## ಸುತ್ತೋಲೆ

**ವಿಷಯ**: ಜುಲೈ 2021ರ ಪೂರಕ ಪರೀಕ್ಷೆಯ ಪ್ರಾಯೋಗಿಕ ಪರೀಕ್ಷೆಗಳಲ್ಲಿ ಕಂಡು ಬಂದಿರುವ ಕೆಲವು ನ್ಯೂನ್ಯತೆಗಳ ಬಗ್ಗೆ.

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಜುಲೈ 2021ರ ಪೂರಕ ಪರೀಕ್ಷೆಯ ಪ್ರಾಯೋಗಿಕ ಪರೀಕ್ಷೆಗಳನ್ನು ದಿ|| 16.07.2021 ರಿಂದ 23.07.2021 ರವರೆಗೆ ನಡೆಸಿ 27.07.2021ರೊಳಗೆ ಪ್ರಾಯೋಗಿಕ ಪರೀಕ್ಷೆಯ ಉತ್ತರ ಪತ್ರಿಕೆಗಳನ್ನು ಮಂಡಳಿಗೆ ಸಲ್ಲಿಸಲು ಸೂಚಿಸಲಾಗಿತ್ತು.

ಸದರಿ ಉತ್ತರ ಪತ್ರಿಕೆಗಳು ಮಂಡಳಿಗೆ ಸಲ್ಲಿಕೆಯಾಗಿರುವ ಬಗ್ಗೆ ಪರಿಶೀಲಿಸಲಾಗಿ ಕೆಲವು ಖಾಸಗಿ ಪ್ಯಾರಾ ಮೆಡಿಕಲ್ ಕಾಲೇಜುಗಳ ಪ್ರಾಯೋಗಿಕ ಪರೀಕ್ಷೆಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿರುವುದಾಗಲಿ, ಅಂಕಗಳನ್ನು ನಮೂದಿಸಿ ಪರೀಕ್ಷಕರು ಸಹಿ ಮಾಡಿರುವುದಾಗಲಿ ಕಂಡುಬಂದಿರುವುದಿಲ್ಲ ಹಾಗೂ ಪ್ರಾಯೋಗಿಕ ಪರೀಕ್ಷೆಗಳನ್ನು ಮಂಡಳಿಯ ಪಠ್ಯ ಕ್ರಮದ ಪ್ರಕಾರ ನಡೆಸದೆ ಇರುವುದು ಕಂಡು ಬಂದಿರುತ್ತದೆ. ಈ ಕಾರಣಕ್ಕಾಗಿ ಅಂತಹ ಕಾಲೇಜುಗಳ ಪ್ರಾಯೋಗಿಕ ಪರೀಕ್ಷೆಯ ಸಂಭಾವನೆಯನ್ನು ತಡೆಹಿಡಿಯಲಾಗಿದೆ.

ಮುಂದುವರೆದು ಇನ್ನೂ ಕೆಲವು ಕಾಲೇಜುಗಳಿಂದ ಸದರಿ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಯಾವುದೇ ಉತ್ತರ ಪತ್ರಿಕೆಗಳು ಮಂಡಳಿಗೆ ಇದುವರೆವಿಗೂ ಸಲ್ಲಿಕೆಯಾಗಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ, ಮುಂಬರುವ ಪ್ರಾಯೋಗಿಕ ಪರೀಕ್ಷೆಗಳನ್ನು ಥಿಯರಿ ಪರೀಕ್ಷೆಗಳಂತೆ ಆಯಾ ಜಿಲ್ಲೆಗಳಲ್ಲಿಯೇ ತಟಸ್ಥ ಪ್ರಾಯೋಗಿಕ ಪರೀಕ್ಷಾ ಕೇಂದ್ರಗಳನ್ನು ಗುರುತಿಸಿ, ಮಂಡಳಿಯ ವತಿಯಿಂದಲೇ ಬಾಹ್ಯ ಪರೀಕ್ಷಕರನ್ನು ನೇಮಿಸಿ ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸಲು ಕ್ರಮ ಕೈಗೊಳ್ಳಲಾಗುವುದು ಎಂಬ ಅಂಶವನ್ನು ಈ ಮೂಲಕ ಮಂಡಳಿಯಲ್ಲಿ ಸಂಯೋಜನೆಗೊಂಡಿರುವ ರಾಜ್ಯದ ಎಲ್ಲಾ ಸರಕಾರಿ ಮತ್ತು ಖಾಸಗಿ ಪ್ಯಾರಾ ಮೆಡಿಕಲ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ.

**ವಿಶೇಷಾಧಿಕಾರಿಗಳು**

Special Officer
Karnataka Nursing and
Paramedical (Regulating) Authority
Bengaluru